SRI PRABHAKAR TELKAR.— When is this factory going to be commissioned ?

SRI AZEEZ SAIT.—As I already said, it will take about 36-48 months.

SRI PRABHAKAR TELKAR.—There are several other companies which are just coming over and visiting Chitapur and surrounding areas for establishing mini-cement plants also. Is the Government going to give any sort of help to these companies ?

SRI AZEEZ SAIT.—There are about 29 places identified for raw-material to set up mini cement plants, out of which we have identified twelve entreprenuers. Foundation-stone has been laid in respect of one. Feasibility reports are being prepared for the remaining companies. I am sure all the twelve mini-plants may come up within one and half years. Gulbarga district has been given two licenses for mini-cement plants, for which I don't have detailed information.

SRI PRABHAKAR TELKAR.-I am quite happy and I congradlate our Government and Sri Azeez Sait, for the assurance that has been given regarding establishment of a cement factory at Chitapur within 48 months.

SRI AZEEZ SAIT.-Thank you very much. You are a very simple man.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—(ಇ) ಪ್ರಶ್ನೆಗೆ ಉತ್ತರವಾಗಿ ತಾವು ಇಲ್ಲಿ ಈ ವಿಷಯವು ಸಕ್ರೀಯ ಪರಿಶೀಲನೆಯಲ್ಲಿದೆ, ಎಂದೂ ಹೇಳಿದ್ದೀರಿ. ಈಗ ಹೇಳುತ್ತಿದ್ದೀರಿ ೫೬-೪೮ ತಿಂಗಳಲ್ಲಿ ಇದನ್ನು ಕಂಪ್ಲೀಟ್ ಮಾಡುತ್ತೇವೆಂದು. ಆದ್ದರಿಂದ ತಾವು ಉತ್ತರದಲ್ಲಿ ಕೊಟ್ಟಿರುವುದು ಸರಿಯೇ, ಅಥವಾ ಈಗ ಹೇಳುತ್ತಿರುವುದು ಸರಿಯೇ ?

ಶ್ರೀ ಅಜೀಜ್‌ಸೇಟ್.-ಎರಡೂ ಸರಿ. ನಾವು ಅವರಿಗೆ ಮೈನಿಂಗ್ ಲೈಸೆನ್ಸ್ ಕೊಟ್ಟು ಕಮಿಷನ್ ಆಗ ಬೇಕಾದರೆ, ೫೬-೪೮ ತಿಂಗಳು ಬೇಕಾಗುತ್ತದೆ. ಒಟ್ಟಿನಲ್ಲಿ ಚಿತಾಪುರಕ್ಕೆ ಸಿಮೆಂಟ್ ಫ್ಯಾಕ್ಟರಿ ಬಂದೇ ಬರುತ್ತದೆ, ಬರುವವರೆಗೂ ಮಾನ್ಯ ಸದಸ್ಯರು ತಾಳ್ಮೆಯಿಂದಿರಬೇಕು.

National Rural Water Supply Schemes in Basavana - Bagewadi Taluk

1049 SRI B. S. PATIL (Huvinahipparagi)-Will the Minister for Rural Development and Panchayat Raj be pleased to state.-

(a) the names of villages in Basavana-Bagewadi Taluk where the National Rural Water Supply Scheme has been completed ;

b) the names of villages where the scheme has been sanctioned and works not completed ;

(c) the villages where the scheme has been extended during this year ;

(d) whether the Government would take action to implement the said scheme to Yellamma Budihal village in Muddebihal taluk during this year ?

SRI K. B. SHIVIAH (Minister for Horticulture and Sericulture) [On behalf of SRI K. PRABHAKAR (Minister for Rural Development and Panchayati Raj].-

(a) 1. Nidagundi 2. Ingaleswar

(b) 1. Mangoli 2. Yelawara 3. Donoor 4. Sasanoor 5. Kadakol

(c) The water supply scheme has not been extended so far to any of new villages in this taluk during this year.

(d) An estimate of Rs. 1.75 lakhs has been prepared for supply of water to Yellamma Budihal village in Muddebihal taluk and has been recommended under Central Government expeditious water supply scheme. The work of this scheme will be started after the receipt of approval by the Central Government.

ಶ್ರೀ ಬಿ. ಎಸ್. ಪಾಟೀಲ್. —ನಾನು ಈ ಪ್ರಶ್ನೆಯನ್ನು ಕೇಳಿದ್ದು ತಾ : ೧೭-೬-೧೯೭೮ರಂದು ಹನ್ನೊಂದು ತಿಂಗಳ ನಂತರ ಇದಕ್ಕೆ ಉತ್ತರ ಕೊಡಲಾಗಿದೆ. ಇಷ್ಟೆಂದು ತಡವಾಗಿ ಉತ್ತರ ಕೊಟ್ಟರೆ ಇದರ ಮಹತ್ವ ಹೋಗುವುದರಿಂದ ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಹೇಳುತ್ತೇನೆ.

ಇನ್ನು ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ ಮಂಗೋಲಿ, ಯಳವಾರ, ಡೋಣೂರು, ಸಾಸನೂರು ಮತ್ತು ಕಡಕೋಳದಲ್ಲಿ ಈ ಯೋಜನೆಗಳ ಕೆಲಸ ಪ್ರಗತಿಯಲ್ಲಿದೆ ಎಂದು ಹೇಳಲಾಗಿದೆ. ಆದರೆ ಪೂರ್ತಿಯಾಗಿ ಸುಳ್ಳು ಎಂದು ಹೇಳುತ್ತೇನೆ. ಸಾಸನೂರು ಮತ್ತು ಕಡಕೋಳದಲ್ಲಿ ಇನ್ನೂ ಕೆಲಸ ಪ್ರಾರಂಭವಾಗಿಲ್ಲ. ನನ್ನ ಸ್ವಂತ ಊರಾದ ಸಾಸನೂರಿನಲ್ಲಿ ೧೯೭೧ರಲ್ಲಿ ಒಂದು ಪಂಪ್-ಹೌಸ್ ಕಟ್ಟಲಾಯಿತು. ಪೈಪ್-ಲೈನ್ ಕೆಲಸ ಸಹ ಆಯಿತು. ಆದರೆ ಕೆಲಸ ಇನ್ನೂ ಪ್ರಾರಂಭವಾಗಿಲ್ಲ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದರೆ ಅವರಿಂದ ಉತ್ತರ ಬಂದಿಲ್ಲ. ಕಳೆದ ೮ ವರ್ಷಗಳಿಂದ ಈ ಕೆಲಸ ಪ್ರಾರಂಭವಾಗದಿರುವುದಕ್ಕೆ ಕಾರಣವೇನು ? ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಾ ?

† ಶ್ರೀ ಕೆ. ಬಿ. ಶಿವಯ್ಯ.—ಈಗ ಸಾಸನೂರಿನಲ್ಲಿ ಬಾವಿ ಕೆಲಸ ಪೂರ್ತಿಯಾಗಿದೆ. ಆದರೆ ಅದನ್ನು ಜಾರಿಗೆ ಕೊಡಲು ಅಲ್ಲಿಗೆ ಇನ್ನೂ ವಿದ್ಯುಚ್ಛಕ್ತಿ ಬಂದಿಲ್ಲ. ಬಸವನ ಬಾಗೇವಾಡಿ ತಾಲೂಕಿಗೆ ಸೇರಿದ ಕೆಲವು ಗ್ರಾಮಗಳಲ್ಲಿ ಈ ಯೋಜನೆಯ ಅಂಗವಾಗಿ ಕೆಲಸಗಳನ್ನು ತೆಗೆದುಕೊಂಡಿರುವುದು ನಿಜ. ಆದರೆ ಕೆಲವು ಪಂಚಾಯಿತಿಗಳು ತಮ್ಮ ಭಾಗದ ಹತ್ತು ಪರ್ಸೆಂಟ್ ಪಂತಿಗೆಯನ್ನು ಕಟ್ಟದ ಕಾರಣ ಅಲ್ಲಿ ಇನ್ನೂ ಕೆಲವು ಪ್ರಾರಂಭವಾಗಿಲ್ಲ ಹತ್ತು ಪರ್ಸೆಂಟ್ ಹಣ ಕಟ್ಟಿರುವ ಕಡೆಗಳಲ್ಲಿ ಬಾವಿ ಕೆಲಸ ಮುಗಿದಿದೆ. ಆದರೆ ಅಲ್ಲಿಗೆ ವಿದ್ಯುಚ್ಛಕ್ತಿ ಇನ್ನೂ ಬಂದಿಲ್ಲ. ಈ ಕಾರಣದಿಂದ ಕೆಲಸ ಪೂರ್ತಿಯಾಗಿಲ್ಲ. ಸಾಸನೂರಿನಲ್ಲಿಯೂ ಇದೇ ಕಾರಣದಿಂದ ಕೆಲಸ ನಿಂತಿದೆ.

ಶ್ರೀ ಬಿ. ಎಸ್. ಪಾಟೀಲ್.—ಕಡಕೊಳ ಗ್ರಾಮಕ್ಕೆ ವಿದ್ಯುಚ್ಛಕ್ತಿ ಬಂದು ಒಂದೂವರೆ ವರ್ಷವಾಯಿತು. ಆದರೂ ಕೆಲಸ ಪ್ರಾರಂಭವಾಗದಿರಲು ಕಾರಣವೇನು ?

ಶ್ರೀ ಕೆ. ಬಿ. ಶಿವಯ್ಯ.—ಮಾರ್ಚಿ-೧೯೮೦ರ ವೇಳೆಗೆ ಆ ಕೆಲಸ ಪೂರ್ಣ ಆಗುತ್ತದೆ.